ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 28-01-1980.

# *ಸಂಪೂರ್ಣ ಬ್ರಹ್ಮಾ ಹಾಗೂ ಬ್ರಾಹ್ಮಣರ ಸಂಪೂರ್ಣ ಸ್ವರೂಪದ ಅಂತರದ ಕಾರಣ ಹಾಗೂ ನಿವಾರಣೆ.*

(सम्पूर्ण ब्रह्मा और सम्पूर्ण ब्राह्मणों के सम्पूर्ण स्वरूप के अन्तर का कारण और निवारण)

ಇಂದು ಪ್ರತಿಯೊಂದು ಮಕ್ಕಳ ಡಬಲ್ ಸ್ವರೂಪವನ್ನು ನೋಡುತ್ತಿದ್ದೇವೆ. ಡಬಲ್ ಸ್ವರೂಪ ಯಾವುದು? ಒಂದು ವರ್ತಮಾನ ಪರುಷಾರ್ಥಿ ಸ್ವರೂಪ, ಇನ್ನೊಂದು ವರ್ತಮಾನ ಜನ್ಮದ ಅಂತಿಮ ಸಂಪೂರ್ಣ ಫರಿಶ್ತಾ ಸ್ವರೂಪ. ಈ ಸಮಯದಲ್ಲಿ 'ಹಮ್ ಸೋ, ಸೋ ಹಮ್'(ನೀನೆ ನಾನು, ನಾನೇ ನೀನು)ನ ಮಂತ್ರದಲ್ಲಿ ಮೊದಲು ಹಮ್ ಸೋ ಫರಿಶ್ತಾ ಸ್ವರೂಪರಾಗಿದ್ದೇವೆ, ನಂತರ ಭವಿಷ್ಯದಲ್ಲಿ ಹಮ್ ಸೋ ದೇವತಾ ರೂಪವಾಗಿದೆ. ಇಂದು ವತನದಲ್ಲಿ, ಎಲ್ಲಾ ಮಕ್ಕಳ ನಂಬರ್‌ವಾರ್ ಪುರುಷಾರ್ಥದನುಸಾರವಾಗಿ ಅಂತಿಮ ಫರಿಶ್ತಾ ಸ್ವರೂಪವೇನಾಗಿದೆಯೋ, ಆ ರೂಪವನ್ನು ಇಮರ್ಜ್ ಮಾಡಿದರು. ಹೇಗೆ ಸಾಕಾರ ಬ್ರಹ್ಮಾ ಮತ್ತು ಸಂಪೂರ್ಣ ಬ್ರಹ್ಮಾ ಇದ್ದಾರೆ, ಇಬ್ಬರ ಅಂತರವನ್ನು ನೋಡುತ್ತಾ ಮತ್ತು ಅನುಭವ ಮಾಡುತ್ತಿದ್ದರು- ಪುರುಷಾರ್ಥಿ ಮತ್ತು ಸಂಪೂರ್ಣತೆಯಲ್ಲಿ ವ್ಯತ್ಯಾಸವೇನಿದೆ! ಅದೇ ರೀತಿ ಇಂದು ಮಕ್ಕಳ ಅಂತರವನ್ನು ನೋಡುತ್ತಿದ್ದರು, ದೃಶ್ಯವು ಬಹಳ ಚೆನ್ನಾಗಿತ್ತು. ಕೆಳಗೆ ತಪಸ್ವಿ ಪುರುಷಾರ್ಥಿ ರೂಪ ಮತ್ತು ಮೇಲೆ ನಿಂತಿರುವ ಫರಿಶ್ತಾ ರೂಪ. ತಮ್ಮ-ತಮ್ಮ ರೂಪಗಳನ್ನು ಇಮರ್ಜ್ ಮಾಡಿಕೊಳ್ಳಲು ಸಾಧ್ಯವೇ? ತಮ್ಮ ಸಂಪೂರ್ಣ ರೂಪವು ಕಂಡು ಬರುತ್ತದೆಯೇ? ಸಂಪೂರ್ಣ ಬ್ರಹ್ಮಾ ಮತ್ತು ಸಂಪೂರ್ಣ ಬ್ರಾಹ್ಮಣ. ಪ್ರತಿಯೊಬ್ಬರೂ ತಿಳಿಯುತ್ತಾರೆ- ಬ್ರಹ್ಮಾ ಹಾಗೂ ನಮ್ಮ ಸಂಪೂರ್ಣ ರೂಪದಲ್ಲಿ ಎಷ್ಟು ಅಂತರವಿರಬಹುದು. ನಂಬರ್‌ವಾರ್ ಇದೆಯಲ್ಲವೆ. ಅಂದಮೇಲೆ ವತನದಲ್ಲಿ ಏನಾಯಿತು! ನಂಬರ್‌ವಾರ್ ಫರಿಶ್ತಾ ಸ್ವರೂಪವು ಬಹಳ ದೊಡ್ಡದಾದ ವೃತ್ತಾಕಾರದಲ್ಲಿ ರಾಜ್ಯ ದರ್ಬಾರಿನ ರೂಪದಲ್ಲಿ ಇಮರ್ಜ್ ಆಗಿತ್ತು. ಲೈಟಿನ ಶೇಡ್‌ನಲ್ಲಿ ವ್ಯತ್ಯಾಸವಿತ್ತು. ಕೆಲವರದು ವಿಶೇಷವಾಗಿ ಹೊಳೆಯುತ್ತಿರುವ ರೂಪವಿತ್ತು, ಕೆಲವರದು ಮಧ್ಯಮ ಪ್ರಕಾಶತೆಯ ರೂಪವಿತ್ತು ಆದರೆ ವಿಶೇಷವಾಗಿ ಅಂತರವು- ಮಸ್ತಕದ ಮಧ್ಯದಲ್ಲಿ ಹೊಳೆಯುತ್ತಿರುವ ಮಣಿಯ ರೂಪದಲ್ಲಿ ಆತ್ಮವಿತ್ತು. ಕೆಲವರದು ಹೊಳಪು ಹಾಗೂ ಪ್ರಕಾಶತೆಯಿತ್ತು. ಆದರೆ ಹರಡಿರಲಿಲ್ಲ. ಕೆಲವರ ಪ್ರಕಾಶತೆಯೇ ಕಡಿಮೆಯಿತ್ತು. ಬಾಪ್‌ದಾದಾರವರು ಎಲ್ಲಾ ಮಕ್ಕಳ ಅಂತರವನ್ನು ಪರಿಶೀಲನೆ ಮಾಡಿದರು. ಆ ಪರಿಶೀಲನೆಯಲ್ಲಿ ನೋಡಿದರು- ಯಂತ್ರದ ಗತಿಯು ತೀವ್ರವಾಗಿತ್ತು. ಪುರುಷಾರ್ಥಿ ಮತ್ತು ಸಂಪೂರ್ಣತೆಯು ಇಬ್ಬರಲ್ಲಿಯೂ ಸಮಾನತೆಯ ಅಂತರವೂ ಹೆಚ್ಚಿನ ಮಟ್ಟಿಗೆ ಕಂಡು ಬಂದಿತು. ಹೇಗೆ ವಿಜ್ಞಾನದ ಯಂತ್ರದ ಗತಿಯು ತೀವ್ರವಾಗಿದೆಯೋ ಹಾಗೆಯೇ ಸಮಾನತೆಯ ಪುರುಷಾರ್ಥದ ಗತಿಯು ಅದಕ್ಕಿಂತ ಕಡಿಮೆಯಿತ್ತು.

ಬಾಪ್‌ದಾದಾರವರಲ್ಲಿ ಫಲಿತಾಂಶದ ಬಗ್ಗೆ ಆತ್ಮಿಕ ವಾರ್ತಾಲಾಪ ನಡೆಯಿತು- ಇಷ್ಟೊಂದು ಅಂತರವೇಕೆ? **ಬ್ರಹ್ಮಾತಂದೆಯು ಹೇಳಿದರು- “ನನ್ನ ಎಲ್ಲಾ ಮಕ್ಕಳು ಜ್ಞಾನಪೂರ್ಣರಾಗಿದ್ದಾರೆ", ಶಿವತಂದೆಯು ಹೇಳಿದರು- “ಜ್ಞಾನಪೂರ್ಣರ ಜೊತೆಗೆ ತ್ರಿಕಾಲದರ್ಶಿಯೂ ಆಗಿದ್ದಾರೆ. ತಿಳಿದುಕೊಳ್ಳುವುದರಲ್ಲಿ ಹಾಗೂ ತಿಳಿಸುವುದರಲ್ಲಿ ಬಹಳ ಬುದ್ಧಿವಂತರಾಗಿದ್ದಾರೆ. ತಂದೆಯನ್ನು ಫಾಲೋ ಮಾಡುವುದರಲ್ಲಿಯೂ ಬುದ್ಧಿವಂತರಾಗಿದ್ದಾರೆ, ಅನ್ವೇಷಕರೂ ಆಗಿಬಿಟ್ಟಿದ್ದಾರೆ. ರಚಯಿತನೂ ಆಗಿದ್ದಾರೆ. ಅಂದಾಗ ಅಂತರವು ಹೆಚ್ಚಾಗಿರಲು ಬಾಕಿ ಏನು ಉಳಿದುಕೊಂಡಿತು. ಇದಕ್ಕೆ ಕಾರಣವೇನಾಗಿದೆ?” ಕಾರಣವಂತು ಚಿಕ್ಕದೇ ಆಗಿದೆ. ಬ್ರಹ್ಮಾತಂದೆಯು ಹೇಳಿದರು- “ಮಕ್ಕಳಲ್ಲಿ ಗ್ರಹಿಸುವ ಶಕ್ತಿಯು ಬಹಳ ತೀವ್ರವಾಗಿದೆ ಆದ್ದರಿಂದ ಜ್ಞಾನ, ಗುಣ ಮತ್ತು ಶಕ್ತಿಗಳನ್ನು ಗ್ರಹಿಸುವುದರ ಜೊತೆಜೊತೆಯಲ್ಲಿ, ಅನ್ಯರ ಬಲಹೀನತೆಗಳನ್ನೂ ಗ್ರಹಿಸುವ ಶಕ್ತಿಯು ತೀವ್ರವಾಗಿದೆ. ಗ್ರಹಿಸುವ ಶಕ್ತಿಯ ಮುಂಚೆ ಗುಣಗ್ರಾಹಕ ಎಂಬ ಶಬ್ಧವನ್ನು ಮರೆತು ಹೋಗುತ್ತಾರೆ. ಆದ್ದರಿಂದ ಒಳ್ಳೆಯದರ ಜೊತೆಯಲ್ಲಿ ಬಲಹೀನತೆಗಳನ್ನೂ ಗ್ರಹಿಸುತ್ತಾರೆ”**

ಮತ್ತೇನು ಮಾಡುತ್ತಾರೆ- ನಂತರ ಅಲ್ಲಿ ಒಂದು ಆಟವು ಇಮರ್ಜ್ ಆಯಿತು. ಹೇಗೆ ಇಲ್ಲಿ ತಮ್ಮ ಪ್ರದರ್ಶನಿಗಳಲ್ಲಿ ಒಂದು ಚಿತ್ರವೂ ಇದೆ. ತಮ್ಮ ಚಿತ್ರವು ಬೇರೆ ಲಕ್ಷ್ಯದೊಂದಿಗೆ ಇದೆ ಆದರೆ ರೂಪರೇಖೆಗಳು ಅದೇ ಇದೆ. ಆ ಚಿತ್ರವಾಗಿದೆ- ಶಾಂತಿಯ ದಾತ ಯಾರು? ಎಂಬುದಾಗಿದೆ. ಇಂತಹ ರೂಪರೇಖೆಯಿಂದ ಸ್ವಲ್ಪ ಮಕ್ಕಳು ಇಮರ್ಜ್ ಆದರು. ಮತ್ತೇನಾಯಿತು? ಒಬ್ಬರ ಬಲಹೀನತೆಯ ಮಾತನ್ನು ಮೊದಲನಂಬರಿನಲ್ಲಿ ನಿಂತಿರುವಂತಹ ಮಕ್ಕಳಿಗೆ ತಿಳಿಸಲಾಯಿತು. ಈ ಮಾತು ತೀವ್ರ ಪುರುಷಾರ್ಥದ ಲೆಕ್ಕದಿಂದ ಸರಿಯಿರಲಿಲ್ಲ. ಅಂದಮೇಲೆ ಏನಾಯಿತು? ಅವರು ಅನ್ಯರ ಕಡೆಗೆ ಸನ್ನೆ ಮಾಡಿದರು. ಇದು ನನ್ನ ಮಾತಲ್ಲ ಆದರೆ ಇವರ ಮಾತಾಗಿದೆ. ಇನ್ನೊಬ್ಬರು ಹೇಳಿದರು- ಮೂರನೆಯವರೂ ಅದೇ ರೀತಿ ಮಾಡಿದರು ಆದ್ದರಿಂದ ನಾನು ಮಾಡಿದೆನು. ನಾಲ್ಕನೆಯವರು ಹೇಳಿದರು- ಇದನ್ನಂತು ಮಹಾರಥಿಗಳೂ ಮಾಡುತ್ತಾರೆ. ಐದನೆಯವರು ಹೇಳಿದರು- ಈ ರೀತಿ ಸಂಪೂರ್ಣರಂತು ಯಾರಾಗಿದ್ದಾರೆ. ಆರನೆಯವರು ಹೇಳಿದರು- ಅರೆ! ಇದಂತು ಆಗುತ್ತಿರುತ್ತದೆ. ಏಳನೆಯವರು ಹೇಳಿದರು- ಹಾಗಾದರೆ ಸಂಪೂರ್ಣರಾಗಿ ಸೂಕ್ಷ್ಮ ವತನದಲ್ಲಿ ಹೊರಟು ಹೋಗುತ್ತಾರೆ. ಎಂಟನೆಯವರು ಹೇಳಿದರು- ಬಾಪ್‌ದಾದಾರವರಂತು ಸೂಚನೆಯನ್ನು ಕೊಡುತ್ತಿದ್ದಾರೆ, ಅದನ್ನು ಮಾಡಬೇಕಾಗಿದೆ ಆದರೆ ಸಂಘಟನೆಯಲ್ಲಿ, ಬಯಸದಿದ್ದರೂ ಸ್ವಲ್ಪ ಮಾಡಿಬಿಡುತ್ತೇವೆ- ಈ ರೀತಿ ಪುರುಷಾರ್ಥದ ಮಾತಿನಲ್ಲಿ ಒಬ್ಬರು ಇನ್ನೊಬ್ಬರನ್ನು ನೋಡುತ್ತಾ ಮತ್ತು ಅವರ ಮೇಲೆ ಇಡುತ್ತಾ ಮಾತೇ ಬದಲಾಗಿಬಿಟ್ಟಿದೆ. ಇತ್ತೀಚೆಗೆ ಬಹಳಷ್ಟು ಇಂತಹ ಪ್ರತ್ಯಕ್ಷತೆಯ ಆಟವು ನಡೆಯುತ್ತದೆ ಮತ್ತು ಇದೇ ಆಟದಲ್ಲಿ ಲಕ್ಷ್ಯ ಹಾಗೂ ಲಕ್ಷಣದಲ್ಲಿ ಮಹಾನ್ ಅಂತರವಾಗಿ ಬಿಡುತ್ತದೆ. ಅಂದಮೇಲೆ ಕಾರಣವೇನಾಯಿತು? ಇದೇ ಸಂಸ್ಕಾರದ ಕಾರಣದಿಂದ ಈಗಿನವರೆಗೂ ಸಂಪೂರ್ಣವಾಗಿ ಸಂಸ್ಕಾರವು ಇಮರ್ಜ್ ಆಗಲು ಸಾಧ್ಯವಾಗುತ್ತಿಲ್ಲ.

ಅಂದಮೇಲೆ ಬಾಪ್‌ದಾದಾರವರು ತಿಳಿಸಿದರು- ಈ ಆಟದ ಕಾರಣದಿಂದ ಪುರುಷಾರ್ಥಿ ಮತ್ತು ಸಂಪೂರ್ಣತೆಯ ಮಿಲನವಾಗಲು ಸಾಧ್ಯವಾಗುತ್ತಿಲ್ಲ. ಮೂಲ ಕಾರಣವೇನೆಂದರೆ ಗ್ರಹಿಸುವ ಶಕ್ತಿಯಿದೆ ಆದರೆ ಗುಣಗ್ರಾಹಕರಾಗುವ ಶಕ್ತಿಯು ಕಡಿಮೆಯಿದೆ. ಇನ್ನೊಂದು ಮಾತು- ಈ ಆಟದಿಂದಲೂ ಸಹ ತಿಳಿದುಕೊಂಡಿರಬಹುದು, ಏನೆಂದರೆ ತಮ್ಮ ತಪ್ಪನ್ನು ಅನ್ಯರ ಮೇಲೆ ಹಾಕುವುದು ಬರುತ್ತದೆ ಆದರೆ ತನ್ನ ತಪ್ಪಿನ ಅನುಭವ ಮಾಡುತ್ತಾ, ಸ್ವಯಂನ ಮೇಲೆ ಹಾಕಿಕೊಳ್ಳುವುದಕ್ಕೆ ಬರುವುದಿಲ್ಲ. ಆದ್ದರಿಂದ ಬಾಪ್‌ದಾದಾರವರು ಹೇಳಿದರು- ಜ್ಞಾನಪೂರ್ಣರಾಗಿದ್ದಾರೆ, ಬಿಡಿಸಿಕೊಳ್ಳುವುದರಲ್ಲಿಯೂ ಬುದ್ಧಿವಂತರಾಗಿದ್ದಾರೆ ಆದರೆ ಸ್ವಯಂನ್ನು, ಬದಲಾಯಿಸಿಕೊಳ್ಳುವುದರಲ್ಲಿ ಕಡಿಮೆ. ಇನ್ನೂ ಒಂದು ಕಾರಣವು ಹೊರಬಂದಿತು. ಅದೇನಾಗಿರಬಹುದು? ಆ ಕಾರಣದಿಂದಲೇ ಪ್ರತ್ಯಕ್ಷತೆಯಾಗುವುದರಲ್ಲಿ ಸ್ವಲ್ಪ ನಿಧಾನವಾಗುತ್ತಿದೆ?

ಆ ಕಾರಣವಾಗಿದೆ- ಸ್ವಚಿಂತನೆ. ಸ್ವಯಂನ ಬಗ್ಗೆ **ಸ್ವ- ಚಿಂತಕ' ಮತ್ತು ಅನ್ಯರ ಬಗ್ಗೆ 'ಶುಭಚಿಂತಕ', ಸ್ವ-ಚಿಂತನೆ ಅರ್ಥಾತ್ ಮನನಶಕ್ತಿ ಮತ್ತು ಶುಭಚಿಂತಕ ಅರ್ಥಾತ್ ಸೇವೆಯ ಶಕ್ತಿ ವಾಚಾಸೇವೆಗೆ ಮೊದಲು ಶುಭಚಿಂತಕ ಭಾವನೆಯಿಂದ ಧರಣಿಯನ್ನು ಎಲ್ಲಿಯವರೆಗೆ ತಯಾರು ಮಾಡುವುದಿಲ್ಲವೋ, ಅಲ್ಲಿಯವರೆಗೆ ವಾಚಾಸೇವೆಯ ಫಲವೂ ಹೊರಬರುವುದಿಲ್ಲ. ಆದ್ದರಿಂದ ಮೊದಲು ಸೇವೆಗೆ ಆಧಾರವಾಗಿದೆ- ಶುಭಚಿಂತಕ. ಈ ಭಾವನೆಯು ಆತ್ಮರ ಗ್ರಹಿಸುವ ಶಕ್ತಿಯನ್ನು ಹೆಚ್ಚಿಸುತ್ತದೆ. ಅದರ ಇಚ್ಛೆಯೂ ಹೆಚ್ಚುತ್ತದೆ. ಈ ಕಾರಣದಿಂದ ವಾಣಿಯ ಸೇವೆಯು ಸಹಜ ಮತ್ತು ಸಫಲವಾಗಿ ಬಿಡುತ್ತದೆ.** ಅಂದಮೇಲೆ ಸ್ವಯಂನ ಬಗ್ಗೆ ಸ್ವಚಿಂತನೆಯಿರುವವರು ಸದಾ ಮಾಯಾಪ್ರೂಫ್, ಯಾರದೇ ಬಲಹೀನತೆಗಳನ್ನು ಗ್ರಹಿಸುವುದರಿಂದ ಪ್ರೂಫ್ ಆಗಿರುತ್ತಾರೆ. ವ್ಯಕ್ತಿ ಅಥವಾ ವೈಭವದ ಆಕರ್ಷಣೆಯಿಂದ ಪ್ರೂಫ್ ಆಗಿಬಿಡುತ್ತಾರೆ. ಆದ್ದರಿಂದ ಇನ್ನೊಂದು ಕಾರಣದ ನಿವಾರಣೆಯ ರೂಪದಲ್ಲಿ ತಿಳಿಸಿದೆವು- 'ಶುಭಚಿಂತಕ ಮತ್ತು ಸ್ವಚಿಂತಕರಾಗಿರಿ', ಅನ್ಯರನ್ನು ನೋಡಬಾರದು. ಇದನ್ನು ಸ್ವಯಂ ಮಾಡಬೇಕು. ತಮ್ಮ ಪುರುಷಾರ್ಥಿಗಳ ಸ್ಲೋಗನ್ ಆಗಿದೆ- **“ನನ್ನನ್ನು ನೋಡಿ ಅನ್ಯರು ಮಾಡುವರು”** ಅನ್ಯರನ್ನು ನೋಡಿ ನಾನು ಮಾಡುವೆನು' ಎನ್ನುವುದಿರಬಾರದು. ಅಂದಮೇಲೆ ಯಾವ ಆತ್ಮಿಕ ವಾರ್ತಾಲಾಪವು ನಡೆಯಿತು? ಎನ್ನುವುದನ್ನು ತಿಳಿಸಿದೆವು.

ಇತ್ತೀಚೆಗೆ ಬಾಪ್‌ದಾದಾರವರು ಯಾವ ಕಾರ್ಯವನ್ನು ಮಾಡುತ್ತಿದ್ದಾರೆ? ಅಂತಿಮ ಮಾಲೆಯನ್ನು ಮಾಡುವುದಕ್ಕೆ ಮೊದಲು ಮಣಿಗಳ ಆಯ್ಕೆಯ ಸೆಕ್ಷನ್‌ನ್ನು ತಯಾರು ಮಾಡುತ್ತಿದ್ದಾರೆ. ಆಗಲೇ ಬೇಗ- ಬೇಗನೆ ಪೋಣಿಸಲ್ಪಡಲಾಗುತ್ತದೆ. ಅಂದಮೇಲೆ ಪ್ರತಿಯೊಬ್ಬರೂ ತಮ್ಮನ್ನು ತಾವು ನೋಡಿಕೊಳ್ಳಿರಿ- ನಾನು ಯಾವ ಸೆಕ್ಷನ್‌ನಲ್ಲಿದ್ದೇನೆ. ನಂಬರ್‌ವನ್ ಆಗಿದೆ- 8 ರತ್ನಗಳು ಮತ್ತು ಸೆಕೆಂಡ್ - 100, ಮೂರನೆಯದು- 16 ಸಾವಿರ, ನಂಬರ್‌ವನ್‌ನ ಚಿಹ್ನೆಯು ಏನಾಗಿದೆ? ನಂಬರ್‌ವನ್‌ನಲ್ಲಿ ಬರಲು ಸಹಜ ಸಾಧನವಾಗಿದೆ -ನಂಬರ್‌ವನ್‌ನಲ್ಲಿ ಬ್ರಹ್ಮಾತಂದೆಯಿದ್ದಾರೆ. ಆ ವನ್‌ನ್ನೇ ನೋಡಿರಿ. ನೋಡುವುದರಲ್ಲಂತು ಬುದ್ಧಿವಂತರಾಗಿದ್ದೀರಲ್ಲವೆ. ಅನೇಕರನ್ನು ನೋಡುವುದಕ್ಕೆ ಬದಲಾಗಿ ಒಬ್ಬರನ್ನು ನೋಡಿರಿ, ಅಂದಮೇಲೆ ಇದು ಸಹಜವೆ ಅಥವಾ ಕಷ್ಟವೇ? ಸಹಜವಾಗಿದೆಯಲ್ಲವೆ, ಅಂದಮೇಲೆ 8 ರತ್ನಗಳಲ್ಲಿ ಬಂದುಬಿಡುತ್ತೀರಿ. ಸೆಕೆಂಡ್ ಮತ್ತು ಥರ್ಡ್‌ನ್ನಂತು ತಿಳಿದುಕೊಂಡಿರುತ್ತೀರಿ.

ಹೇಗೆ ಭಾಗ್ಯದಲ್ಲಿ ತಮ್ಮನ್ನು ಮುಂದಿಡುತ್ತೀರಿ, ಹಾಗೆಯೇ ತ್ಯಾಗದಲ್ಲಿ 'ಮೊದಲು ನಾನು'. ಯಾವಾಗ ತ್ಯಾಗದಲ್ಲಿ ಪ್ರತಿಯೊಬ್ಬ ಬ್ರಾಹ್ಮಣ ಆತ್ಮನು 'ಮೊದಲು ನಾನು' ಎಂದು ಹೇಳುತ್ತಾರೆಯೋ, ಆಗ ಭಾಗ್ಯದ ಮಾಲೆಯು ಎಲ್ಲರ ಕೊರಳನಲ್ಲಿ ಬೀಳುತ್ತದೆ. ತಮ್ಮ ಸಂಪೂರ್ಣ ಸ್ವರೂಪವು ಸಫಲತಾ ಮಾಲೆಯನ್ನು ತೆಗೆದುಕೊಂಡು ಬಂದು, ತಾವು ಪುರುಷಾರ್ಥಿಗಳ ಕೊರಳಿನಲ್ಲಿ ಹಾಕುವುದಕ್ಕಾಗಿ ಸಮೀಪಕ್ಕೆ ಬರುತ್ತಾ ಇದೆ. ಅಂತರವನ್ನು ಸಮಾಪ್ತಿ ಮಾಡಿಬಿಡಬೇಕಾಗಿದೆ. ಹಮ್ ಸೋ ಫರಿಶ್ತಾ ಎನ್ನುವ ಮಂತ್ರವನ್ನು ಪರಿಪಕ್ವ ಮಾಡಿಕೊಂಡಾಗ ವಿಜ್ಞಾನದ ಯಂತ್ರವು ತನ್ನ ಕಾರ್ಯವನ್ನು ಪ್ರಾರಂಭಗೊಳಿಸುತ್ತದೆ ಮತ್ತು ಹಮ್ ಸೋ ಫರಿಸ್ತಾದಿಂದ, ಹಮ್ ಸೋ ದೇವತಾ ಆಗುತ್ತಾ ಹೊಸ ಪ್ರಪಂಚದಲ್ಲಿ ಅವತರಣೆಯಾಗುತ್ತೀರಿ. ಇಂತಹ ಸಾಕಾರ ತಂದೆಯನ್ನು ಅನುಸರಣೆ ಮಾಡಬೇಕಾಗಿದೆ. ಸಾಕಾರನನ್ನು ಫಾಲೋ ಮಾಡುವುದು ಸಹಜವಲ್ಲವೆ. ಅಂದಮೇಲೆ ಸಂಪೂರ್ಣ ಫರಿಶ್ತಾ ಅರ್ಥಾತ್ ಸಾಕಾರ ತಂದೆಯನ್ನು ಫಾಲೋ ಮಾಡಬೇಕಾದಾಗಿದೆ.

**ಇಂದು ಕರ್ನಾಟಕದ ಜೋನ್ ಇದೆ.**

ಕರ್ನಾಟಕದ ವಿಶೇಷತೆಯು ಬಹಳ ಚೆನ್ನಾಗಿದೆ. ಕರ್ನಾಟಕದವರು ಮಹಾ ಜ್ಯೋತಿಯ ಮೇಲೆ ಪತಂಗಗಳಾಗಿ ಸುಟ್ಟು ಹೋಗುವುದರಲ್ಲಿ ನಿಪುಣರಾಗಿದ್ದಾರೆ. ಅಲ್ಲಿ ತಂಡಗಳು ಬಹಳಷ್ಟಿವೆ. ಸುಟ್ಟು ಹೋಗುವುದರಲ್ಲಿ ನಂಬರ್‌ವನ್ ಆಗಿದ್ದಾರೆ. ಸುಟ್ಟನಂತರ ಹೊರಡುವುದು. ಅಂದಮೇಲೆ ಸುಟ್ಟು ಹೋಗುವುದರಲ್ಲಿ (ಅರ್ಪಣೆಯಾಗುವುದು) ಬಹಳ ಬುದ್ಧಿವಂತರಾಗಿದ್ದೀರಿ. ಹೊರಡುವುದರಲ್ಲಿ ಸ್ವಲ್ಪ ಏನು ಮಾಡುತ್ತೀರಿ! ಹೊರಡುವುದರಲ್ಲಿ ನಡೆಯುತ್ತಾ-ನಡೆಯುತ್ತಾ ಬೈಪ್ಲಾಟ್‌ನ್ನು ಬಹಳಷ್ಟು ತೋರಿಸುತ್ತಿರಿ(ಒಂದನ್ನು ಮಾಡುವುದಕ್ಕಾಗಿ ಇನ್ನೊಂದನ್ನು ಸೆಟ್ ಮಾಡುವುದು). ಭಾವನಾಮೂರ್ತಿಯಲ್ಲಿ ನಂಬರ್‌ವನ್, ಸ್ನೇಹಿ ಮತ್ತು ಸಹಯೋಗಿ ಮೂರ್ತಿಯೂ ಆಗಿದ್ದಾರೆ. ಕರ್ನಾಟಕ ನಿವಾಸಿಗಳ ವಿಶೇಷತೆಯು ರಚಯಿತನಾಗುವುದರಲ್ಲಿ ಬುದ್ಧಿವಂತರಾಗಿದ್ದಾರೆ. ವಿಷ್ಣುವಾಗುವುದು(ಪಾಲನೆ) ಕಡಿಮೆ ಬರುತ್ತದೆ. ಶಂಕರನರೂಪ ಅರ್ಥಾತ್ ವಿಘ್ನವಿನಾಶಕ- ಅದರ ಪುರುಷಾರ್ಥವನ್ನೀಗ ಇನ್ನೂ ಹೆಚ್ಚಿನದಾಗಿ ಮಾಡಬೇಕಾಗಿದೆ. ಆದರೂ ಬಾಪ್‌ದಾದಾರವರು ಕರ್ನಾಟಕ ನಿವಾಸಿಗಳಿಗೆ ಶುಭಾಷಯಗಳನ್ನು ಕೊಡುತ್ತಿದ್ದಾರೆ. ಶುಭಾಷಯಗಳನ್ನು ಏಕೆ ಕೊಡುತ್ತಾರೆ? ಏಕೆಂದರೆ ಪ್ರೇಮ ಸ್ವರೂಪ ಲಗನ್ನಿನಲ್ಲಿ ಮಗ್ನರಾಗಿರುವುದರಲ್ಲಿ ಒಳ್ಳೆಯ ಪುರುಷಾರ್ಥಿಯಾಗಿದ್ದಾರೆ. ಈಗ ಮುಂದೆ ಕರ್ನಾಟಕದವರು ಏನು ಮಾಡಬೇಕಾಗಿದೆ, ಯಾವುದು ಉಳಿದುಕೊಂಡಿದೆ? ಕರ್ನಾಟಕದ ಧರಣಿಯು ಫಲದಾಯಕ ವಾಗಿದೆ. ವಿ.ಐ.ಪಿ.ಯ ಫಲವನ್ನು ಕೊಡಲು ಯೋಗ್ಯವಾಗಿದೆ. ಮತ್ತು ಸಹಜವಾಗಿಯೇ ಸಂಬಂಧದಲ್ಲಿ ಬರುವವರಾಗಿದ್ದಾರೆ. ಸಿಲ್ವರ್ ಜುಬಿಲಿಯಲ್ಲಿ ಪ್ರತ್ಯಕ್ಷಫಲವನ್ನು ಕೊಟ್ಟಿಲ್ಲ. ವಿ.ಐ.ಪಿ.ಯ ಗ್ರೂಪ್‌ನ್ನು ಎಲ್ಲಿ ತಂದಿದ್ದೀರಿ? ಹೇಗೆ ಸಹಜ ಧರಣಿಯಾಗಿದೆಯೋ, ಹಾಗೆಯೇ ಭಾರತದಲ್ಲಿ ಧ್ವನಿ ಮೊಳಗಿಸುವುದಕ್ಕೂ ನಿಮಿತ್ತರಾಗುವ ಆತ್ಮರೂ ಸಹ ಅಲ್ಲಿಂದ ಹೊರ ಬರಬಹುದು.

ಭಾರತದ ಇತಿಹಾಸದಲ್ಲಿ ಪ್ರಸಿದ್ಧ ವ್ಯಕ್ತಿಗಳು ಕರ್ನಾಟಕದಲ್ಲಿ ಬಹಳಷ್ಟಿದ್ದಾರೆ. ಆ ಒಬ್ಬರಿಂದ ಅನೇಕರ ಕಲ್ಯಾಣವು ಸಹಜವಾಗಬಹುದು. ಸಿಲ್ವರ್ ಜುಬಿಲಿಯ ಉಡುಗೊರೆಯನ್ನೇನು ತಂದಿದ್ದೀರಿ? ಕರ್ನಾಟಕದವರೀಗ ಕಮಾಲ್ ತೋರಿಸಲಿ.

**ಇಂತಹ ಸದಾ ಸ್ವ-ಚಿಂತಕ ಮತ್ತು ಶುಭ-ಚಿಂತಕ, ಸದಾ ಫಾಲೋ ಫಾದರ್, ಸ್ವಪರಿವರ್ತನೆಯಿಂದ ವಿಶ್ವಪರಿವರ್ತನೆ ಮಾಡುವಂತಹ, ಇಂತಹ ವಿಶ್ವಕಲ್ಯಾಣಕಾರಿ, ಸರ್ವ ಆತ್ಮರ ಮೂಲಕ ಸತ್ಕಾರಿ, ಸದಾ ತ್ಯಾಗದಲ್ಲಿ ಮೊದಲು ನಾನು ಎನ್ನುವವರು, ಇಂತಹ ಶ್ರೇಷ್ಠ ಭಾಗ್ಯಶಾಲಿ, ಮಾಸ್ಟರ್ ಸರ್ವಶಕ್ತಿವಂತ ಆತ್ಮರಿಗೆ ಬಾಪ್ ದಾದಾರವರ ನೆನಪು-ಪ್ರೀತಿ ಹಾಗೂ ನಮಸ್ತೆ.**

ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 28-01-1980.

***ಸಂಪೂರ್ಣ ಬ್ರಹ್ಮಾ ಹಾಗೂ ಬ್ರಾಹ್ಮಣರ ಸಂಪೂರ್ಣ ಸ್ವರೂಪದ ಅಂತರದ ಕಾರಣ ಹಾಗೂ ನಿವಾರಣೆ***

ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಆನಂದ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನೀನೇ ನಾನು, ನಾನೇ ನೀನು ಎಂಬುವ ಮಂತ್ರದಲ್ಲಿ ಮೊದಲು ನಾನು ಫರಿಶ್ತಾ ಭವಿಷ್ಯದಲ್ಲಿ ನಾನೇ ದೇವತೆ.

2. ನನ್ನ ಪ್ರಕಾಶ ಮತ್ತು ಮಸ್ತಕದ ಹೊಳಪು ಬ್ರಹ್ಮಾ ತಂದೆಯ ಸಮಾನವಾಗಿರುವ ಪರಿಶ್ತಾ ಸ್ವರೂಪ.

3. ನಾನು ಗುಣ ಗ್ರಾಹಕನು.

4. ನಾನು ಲಕ್ಷ್ಯ ಮತ್ತು ಲಕ್ಷಣಗಳನ್ನು ಸಮಾನವಾಗಿಟ್ಟುಕೊಂಡು ಸಂಪೂರ್ಣ ಸಂಸ್ಕಾರಗಳನ್ನು ಪ್ರತ್ಯಕ್ಷ ಮಾಡಿದ್ದೇನೆ.

5. ನಾನು  ಸ್ವಚಿಂತಕನು(ಮನನ ಶಕ್ತಿ), ಶುಭ ಚಿಂತಕನು(ಸೇವಾ ಶಕ್ತಿ).

6. ನಾನು ಸ್ವ ಚಿಂತನೆ ಮಾಡಿ ಮಾಯ ಪ್ರೂಫಾಗಿ, ಬಲಹೀನತೆಗಳನ್ನು ಗ್ರಹಿಸುವುದರಿಂದ ರಕ್ಷಣೆಯಾಗಿ, ವ್ಯಕ್ತಿ ವೈಭವ ಆಕರ್ಷಣೆಗಳಿಂದ ರಕ್ಷಣೆಯಾಗಿ ಇದ್ದೇನೆ.

7. ನಾನು "ನನ್ನನ್ನು ನೋಡಿ ಅನ್ಯರು ಮಾಡುತ್ತಾರೆ" ಎಂಬ ಸೂಕ್ತಿಯನ್ನು ಸದಾ ಸ್ಮೃತಿಯಲ್ಲಿಟ್ಟುಕೊಂಡಿದ್ದೇನೆ.